


## ಅಪಾಯಕಾರಿ ರೋಗವೇ?

- ಜೀವಕ್ಕೆ ಅಪಾಯವಿಲ್ಲ: ಟ್ರೈಜೆಮಿನಲ್ ನ್ಯೂರಾಲ್ಜಿಯಾ ಕ್ಯಾನ್ಸರ್ ಅಲ್ಲ. ಇದು ಜೀವಕ್ಕೂ ಅಪಾಯಕಾರಿಯಲ್ಲ. ದೇಹದ ಇತರ ಭಾಗಗಳಿಗೆ ಹರಡುವ ಪ್ರಕ್ಷುಬ್ಧ ರೋಗವೂ ಅಲ್ಲ. ಸರಿಯಾದ ಚಿಕಿತ್ಸೆ ಮತ್ತು ವೈದ್ಯಕೀಯ ಮಾರ್ಗದರ್ಶನದೊಂದಿಗೆ ರೋಗಿಗಳು ನೋವು ನಿವಾರಿಸಿಕೊಳ್ಳಬಹುದು.
- ಚಿಕಿತ್ಸೆಯ ಭರವಸೆ: ಆಧುನಿಕ ವೈದ್ಯ ವಿಜ್ಞಾನದಲ್ಲಿ ಈ ಸ್ಥಿತಿಗೆ ಅನೇಕ ಚಿಕಿತ್ಸಾ ವಿಧಾನಗಳಿವೆ. ಸಮಯೋಚಿತ ಮತ್ತು ಸೂಕ್ತ ಚಿಕಿತ್ಸೆಯೊಂದಿಗೆ ರೋಗಿಗಳು ಸಹಜ ಜೀವನಕ್ಕೆ ಮರಳಬಹುದು.
- ಆತ್ಮವಿಶ್ವಾಸವೇ ಚಿಕಿತ್ಸೆಯ ಅರ್ಧ ಸಫಲತೆ: ದೀರ್ಘಕಾಲೀನ ನೋವಿನ ಸ್ಥಿತಿಗಳಲ್ಲಿ ರೋಗಿಗಳ ಆತ್ಮವಿಶ್ವಾಸ ಮತ್ತು ಮಾನಸಿಕ ಬಲವು ಅತ್ಯಂತ ಮಹತ್ವ. ರೋಗವನ್ನು ಎದುರಿಸುವ ಧೈರ್ಯ ಮತ್ತು ಚಿಕಿತ್ಸೆ ಯಶಸ್ವಿಯಾಗುವ ನಂಬಿಕೆ ವೈದ್ಯಕೀಯ ಚಿಕಿತ್ಸೆಯನ್ನು ಪರಿಣಾಮಕಾರಿಯಾಗಿಸುತ್ತದೆ.
- ಧನಾತ್ಮಕ ಮನೋಭಾವದ ಶಕ್ತಿ: ಧನಾತ್ಮಕ ಮನೋಭಾವ, ದೃಢನಿರ್ಧಾರವು ನೋವಿನ ತೀವ್ರತೆ ಕಡಿಮೆಗೆ ನೆರವಾಗುತ್ತದೆ. ಆತ್ಮವಿಶ್ವಾಸವಿರುವ ರೋಗಿಗಳು ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸುತ್ತಾರೆ. ವೇಗವಾಗಿ ರೋಗ ನಿವಾರಣೆಗೆ ಪೂರಕವಾಗಿರುತ್ತದೆ.

## ‘ಆತ್ಮಹತ್ಯಾ ರೋಗ’ ಹೆಸರೇಕೆ?

‘ಆತ್ಮಹತ್ಯಾ ರೋಗ’ ಎಂಬ ಪದವು ವೈದ್ಯಕೀಯ ಪರಿಭಾಷೆಯಲ್ಲ. ಆದರೆ ಈ ಕಾಯಿಲೆಯು ಜನರ ಜೀವನದ ಮೇಲೆ ಬೀರುವ ಭೀಕರ ಪರಿಣಾಮವನ್ನು ಪ್ರತಿಬಿಂಬಿಸುವ ಭಾಷೆ. ಟ್ರೈಜೆಮಿನಲ್ ನ್ಯೂರಾಲ್ಜಿಯಾ ದೈಹಿಕ ನೋವಿನ ಜೊತೆಗೆ ವ್ಯಕ್ತಿಯ ಮಾನಸಿಕ ಆರೋಗ್ಯದ ಮೇಲೂ ಪರಿಣಾಮ ಬೀರುತ್ತದೆ. ಇತ್ತೀಚಿನ ಅಧ್ಯಯನಗಳ ಪ್ರಕಾರ ಈ ರೋಗವು ತೀವ್ರ ಭಾವನಾತ್ಮಕ ನೋವು, ಆತಂಕ ಮತ್ತು ಕೆಲವೊಮ್ಮೆ ಆತ್ಮಹತ್ಯೆಯ ಆಲೋಚನೆಗಳಿಗೂ ಕಾರಣವಾಗುತ್ತದೆಯಂತೆ.

‘ಆತ್ಮಹತ್ಯಾ ರೋಗ’ ಪದದ ಹಿಂದಿನ ನಿಜ ಅರ್ಥವೇನೆಂದರೆ, ಕೆಲವು ರೋಗಿಗಳು ‘ಈ ನಿರಂತರ ನೋವನ್ನು ಸಹಿಸುವುದಕ್ಕಿಂತ ಸಾಯುವುದೇ ಲೇಸು’ ಎಂದು ಹೇಳುವಷ್ಟು ಅಸಹನೀಯ ಪರಿಸ್ಥಿತಿಯನ್ನು ಅನುಭವಿಸುವುದು. ಇದು ನೋವಿನ ತೀವ್ರತೆಯ ಜೊತೆಗೆ ವ್ಯಕ್ತಿಯ ಮೇಲೆ ಬೀರಿದ ಮಾನಸಿಕ ಹೊರೆಯನ್ನೂ ಸೂಚಿಸುತ್ತದೆ.

ಮೆದುಳಿನ ಅನ್ಯೂರಿಸಮ್ ಮತ್ತು ಆರ್ಟೆರಿಯೊವೆನಸ್ ಮಾಲ್‌ಫಾರ್ಮೇಷನ್ (AVM) ಎಂಬ ಗಂಭೀರ ಸಮಸ್ಯೆಗಳೊಂದಿಗೆ ಹೋರಾಡುತ್ತಿರುವುದಾಗಿ ತಿಳಿಸಿದ್ದಾರೆ.

ಸಲ್ಮಾನ್ ಖಾನ್ ಅವರ ಪ್ರಸ್ತುತ ಆರೋಗ್ಯ ಸ್ಥಿತಿ ಗಮನಿಸಿದರೆ, ಈ ವಯಸ್ಸಿನಲ್ಲಿ ಮೊದಲಿಗಿಂತಲೂ ದ್ವಿಗುಣ ಧೈರ್ಯದಿಂದ ದೈಹಿಕ ಹಾಗೂ ಭಾವನಾತ್ಮಕ ಸವಾಲುಗಳನ್ನು ಎದುರಿಸುತ್ತಿರುವುದು ಲಕ್ಷಾಂತರ ಜನರಿಗೆ ಪ್ರೇರಣೆಯಾಗಿದೆ. ಟ್ರೈಜೆಮಿನಲ್ ನ್ಯೂರಾಲ್ಜಿಯಾ ಮತ್ತು ಇತರ ಗಂಭೀರ ಆರೋಗ್ಯ ಸಮಸ್ಯೆಗಳ ಕುರಿತು ಸಲ್ಮಾನ್ ಖಾನ್ ಅವರ ಮುಕ್ತ ಚರ್ಚೆ, ಕಡಿಮೆ ಗಮನ ಸೆಳೆಯುವ ಈ ಕಾಯಿಲೆಗಳನ್ನು ಚರ್ಚೆಗೆ ತಂದಿವೆ.

### ಟ್ರೈಜೆಮಿನಲ್ ನ್ಯೂರಾಲ್ಜಿಯಾ ಎಂದರೆ?

ನ್ಯೂರಾಲ್ಜಿಯಾ ಎಂದರೆ ನರವೇದನೆ ಅಥವಾ ನರಶೂಲೆ ಎಂದರ್ಥ. ಟ್ರೈಜೆಮಿನಲ್ ಎನ್ನುವ ಮುಖದ ಪ್ರಮುಖ ನರದಿಂದ ಉಂಟಾಗುವ ನೋವನ್ನು ಟ್ರೈಜೆಮಿನಲ್ ನ್ಯೂರಾಲ್ಜಿಯಾ (ಮುಖ ನರಶೂಲೆ) ಎಂದು ಕರೆಯಲಾಗುತ್ತದೆ. ಟ್ರೈಜೆಮಿನಲ್ ನರವು ಟ್ರೈಜೆಮಿನಲ್ ಗ್ಯಾಂಗ್ಲಿಯನ್ ಎಂಬ ನರಕೋಶಗಳ ಸಮೂಹದಿಂದ (ನರಗಂಟು) ಹುಟ್ಟುತ್ತದೆ. ಈ ನರವು ಮುಖದ ಮೂರು ಪ್ರಮುಖ ಭಾಗಗಳಿಗೆ ಶಾಖೆಗಳನ್ನು ನೀಡುವುದರಿಂದ ಇದನ್ನು ‘ಟ್ರೈಜೆಮಿನಲ್’ (ಮೂರು ಜೊತೆಯ) ನರ ಎಂದು ಹೆಸರಿಸಲಾಗಿದೆ.

ಈ ನರವು ಮುಖದಿಂದ ಮೆದುಳಿಗೆ ಸ್ಪರ್ಶ, ಒತ್ತಡ, ನೋವು ಮುಂತಾದ ಎಲ್ಲಾ ಸಂವೇದನೆಗಳನ್ನು ಸಾಗಿಸುವ ವಿದ್ಯುತ್ ತಂತಿಯಂತೆ ಕಾರ್ಯನಿರ್ವಹಿಸುತ್ತದೆ. ನರಕ್ಕೆ ಹಾನಿಯಾದಾಗ, ಆ ಪ್ರದೇಶದ ಸಂವೇದನಾ ವ್ಯವಸ್ಥೆಯು ದೋಷಪೂರಿತವಾಗುತ್ತದೆ. ಮುಖದ ಆ ಭಾಗದಿಂದ ಬರುವ ಸಣ್ಣ ಸ್ಪರ್ಶವೂ ತೀವ್ರ ನೋವಿನ ಸಂಕೇತವಾಗಿ ಮೆದುಳಿಗೆ ತಲುಪುತ್ತದೆ.

ಟ್ರೈಜೆಮಿನಲ್ ನರವು ಮುಖದಲ್ಲಿನ ಸಂವೇದನೆ ಮತ್ತು ಕಚ್ಚುವಿಕೆ, ಅಗೆಯುವಿಕೆಯಂತಹ ಚಲನಾ ಕಾರ್ಯಗಳನ್ನು ನಿಭಾಯಿಸುತ್ತದೆ. ಟ್ರೈಜೆಮಿನಲ್ ನ್ಯೂರಾಲ್ಜಿಯಾದಿಂದ ಉಂಟಾಗುವ ನೋವು ತೀವ್ರ, ತೀಕ್ಷ್ಣವಾದದ್ದು. ವಿದ್ಯುತ್ ಆಘಾತದಂತಹ ಅನುಭವವೆಂದೂ ಹೇಳಲಾಗುತ್ತದೆ. ಈ ನೋವು ನವಿರು ಸ್ಪರ್ಶ, ಮಾತನಾಡುವಿಕೆ ಅಥವಾ ಆಹಾರ ಅಗಿಯುವಿಕೆಯಂತಹ ಸಾಮಾನ್ಯ